44ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.
ಸಿ.ಸಿ. ನಂಃ22466/2017 **ಪ್ರಾಸಾ-**1 **ಚಾಸಾ-**1

| | |
|---|---|
| ಸಾಕ್ಷಿಯ ಹೆಸರು | ಮುತ್ತುರಾಜ್ |
| ತಂದೆಯ/ಗಂಡನ ಹೆಸರು | ಲೇಟ್ ರಾಮಲಿಂಗಂ |
| ವಯಸ್ಸು | 27 ವರ್ಷ |
| ಉದ್ಯೋಗ | ಎಲೆಕ್ಟ್ರಿಷಿಯನ್ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ 14-9-2018 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.
ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದ

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು. ಈ ಪ್ರಕರಣ ನಡೆದದ ಸಮಯದಲ್ಲಿ ನಾವು 2 ನೇ ಆರೋಪಿಗೆ ಸೇರಿದ ಮನೆಯಲ್ಲಿ ಭೋಗ್ಯಕ್ಕೆ ವಾಸವಾಗಿದ್ದೆವು. ಸದರಿ ಭೋಗ್ಯವು 2 ವರ್ಷಕ್ಕೆ ರೂ. 7 ಲಕ್ಷಗಳಿಗೆ ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ. ಭೋಗ್ಯ ಪತ್ರವನ್ನು 2013 ರ ಡಿಸೆಂಬರ್ ತಿಂಗಳಿನಲ್ಲಿ 2 ವರ್ಷಗಳ ಕಾಲಾವದಿಗೆ ಮಾಡಿಕೊಳ್ಳಲಾಗಿರುತ್ತದೆ. ಭೋಗ್ಯದ ಅವಧಿ ಮುಗಿದ ನಂತರ ಆರೋಪಿಗಳು ಈಗ ನಮ್ಮ ಬಳಿ ಹಣ ಇಲ್ಲ, ನಂತರ ಕೊಡುತ್ತೇವೆ ಂದು ಸದರಿ ಭೋಗ್ಯವನ್ನು ಮೂರು ಮೂರು ತಿಂಗಳಿಗೆ ಮುಂದುವರಿಸಿಕೊಂಡು ಬಂದರು.

ದಿಃ 5-4-2017 ರಂದು ರಾತ್ರಿ 8-30 ರಿಂದ 9-30 ಗಂಟೆಯ ಸಮಯದಲ್ಲಿ ಚಾಸಾ-3 ಮತ್ತು ಚಾಸಾ-4 ರವರುಗಳು 1 ನೇ ಮಹಡಿಯಲ್ಲಿರುವ ಆರೋಪಿಗಳ ಮನೆಗೆ ಹೋಗಿದ್ದರು. 1 ನೇ ಮಹಡಿಯಿಂದ ಗಲಾಟೆ ಕೇಳಿಸಿತು. ನಾನು ಆರೋಪಿಗಳ ಮನೆಗೆ ಹೋಗಿ ನೋಡಿದಾಗ, ನಮ್ಮ ತಾಯಿ ಅಳುತ್ತಾ, ನಮ್ಮ ಭೋಗ್ಯದ ಹಣ ವಾಪಸ್ಸು ಕೊಡಿ, ಮಗನಿಗೆ ಮದುವೆ ಮಾಡಬೇಕೆಂದು ಕೇಳುತ್ತಿದ್ದರು. ಆರೋಪಿಗಳು ಪೋಲಿಸ್ ಠಾಣೆಗೆ ಏಕೆ ಹೋಗಿದ್ದೀರಿ, ಹಣ ಕೊಡಲು ಸಾಧ್ಯವಿಲ್ಲ, ನಮ್ಮ ಮನೆಯಲ್ಲಿ ನಿಂತು ಕಣ್ಣೀರು ಸುರಿಸುವ ಆಗಿಲ್ಲ, ಹೋಗಿ ಎಂದು ಬೈಯ್ಯುತ್ತಿದ್ದರು ಮತ್ತು ಅದೇ ಸಮಯಕ್ಕೆ 2 ನೇ ಆರೋಪಿ ವಿಶ್ವನಾಥ್‌ರವರು ನನ್ನ ತಾಯಿಯನ್ನು ಮನೆಯಿಂದ ಆಚೆ ತಳ್ಳಿದರು. ನನ್ನ ಅಣ್ಣ ಹರೀಶ್ ನಮ್ಮ ತಾಯಿಯ ಮೇಲೆ ಕೈ ಮಾಡಲು ಬರುತ್ತೀರಾ ಎಂದು ಕೇಳುತ್ತಿದ್ದನು, ಅದೇ ಸಮಯಕ್ಕೆ 1 ನೇ ಆರೋಪಿ ಭರತ್ ಅಲ್ಲಿಗೆ ಬಂದು ನಮ್ಮ ತಂದೆಗೆ ಜೋರು ಮಾಡಿ ಮಾತನಾಡುತ್ತೀರಾ ಎಂದು, ನಮ್ಮ ಅಣ್ಣನಿಗೆ ಕೋಲಿನಿಂದ ಅಂದರೆ ಕಟ್ಟಿಗೆಯಿಂದ ಹೊಡೆಯಲು ಹೋದನು. ನಾನು ಅಡ್ಡ ಹೋಗಿದ್ದು, ಆ ಸಮಯಕ್ಕೆ ನನ್ನ ಬಲಗೈನ ಮುಂಗೈಗೆ ಏಟು ಬಿದ್ದು, ಬೆರಳುಗಳಿಗೆ ಫ್ರಾಕ್ಚರ್ ಆಗಿರುತ್ತದೆ. 1 ನೇ ಆರೋಪಿಯು ಸಹ ನಮ್ಮನ್ನು ಹಿಡಿದುಕೊಂಡು, ಕೈಯಿಂದು ದೂಡಿದರು. ನಮ್ಮ ಅಣ್ಣನನ್ನು ಹಿಡಿದುಕೊಂಡು ಹೊರಗೆ ತಳ್ಳಿದರು. ಯಾರೇ ಅವರನ್ನು ತಡೆಯಲು ಹೋದರೋ ಅವರನ್ನು ಸಹ ಏಕವಚನದಲ್ಲಿ ಅವಾಚ್ಯ ಶಬ್ದಗಳಿಂದ ನಮ್ಮನ್ನು ಸೇರಿಸಿ

This is a True Copy of the Court Records Online. Authenticated @ districts.ecourtsindia.com/cnr/KABC030971662017/truecopy/order-2.pdf
www.ecourtsindia.com

ಬೈದರು.

ಈ ಸಂಬಂಧ ನಾನು ಮಲ್ಲೇಶ್ವರಂನ ಕೆ ಸಿ ಜನರಲ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಯಶವಂತಪುರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಕೋಲನ್ನು ನೋಡಿ ಗುರುತಿಸಿದ್ದು, ಸದರಿ ಕೋಲನ್ನು ಸಾಕ್ಷಿಯು ಮುದ್ದೆಮಾಲು 1 ಎಂದು ಗುರುತಿಸುತ್ತೇನೆ. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಪ್ರಸ್ತುತ ದೂರನ್ನು ನಿಪಿ-1 ಹಾಗೂ ತಮ್ಮ ಸಹಿಯನ್ನು ನಿಪಿ-1 ಎ ಎಂದು ಗುರುತಿಸುತ್ತೇನೆ. ಮಾರನೇ ದಿನ ಪೋಲಿಸ್ ನವರು ಸ್ಥಳಕ್ಕೆ ಭೇಟಿ ನೀಡಿ, ಅಲ್ಲೇ ಬಿದ್ದಿದ್ದ ಕೋಲನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು, ಪಂಚನಾಮೆಯ ಕ್ರಮವನ್ನು ಜರುಗಿಸಿದರು. ಸಾಕ್ಷಿಯು ಪಂಚನಾಮೆಯನ್ನು ನಿಪಿ-2 ಹಾಗೂ ತಮ್ಮ ಸಹಿಯನ್ನು ನಿಪಿ-2 ಎ ಎಂದು ಗುರುತಿಸುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀಮತಿ ಹೆಚ್ ಎಂ ವಕೀಲರಿಂದ.

ನಾವು ಆ ಮನೆಗೆ ನವೆಂಬರ್ 2013 ರಲ್ಲಿ ಭೋಗ್ಯಕ್ಕೆ ಹೋಗಿರುತ್ತೇವೆ. ಸದರಿ ಮನೆಗೆ ನಾವು ನಾಲ್ಕು ಜನ ಅಣ್ಣ ತಮ್ಮಂದಿರು ಮತ್ತು ನಮ್ಮ ತಾಯಿ ಹೋಗಿರುತ್ತೇವೆ. ಸದರಿ ಮನೆಗೆ ಭೋಗ್ಯಕ್ಕೆಂದು ಹರೀಶ್, ಅಮುದಾ ಹಾಗೂ ಭೂಪಾಲ್ ರವರು ಬಂದಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರಿದು ಭೋಗ್ಯ ಪತ್ರ ಬರೆಸಲು ಮಾತ್ರ ಅವರು ಹೋಗಿದ್ದರು ಆ ಸಮಯದಲ್ಲಿ ನಾನು ಮತ್ತು ನನ್ನ ತಮ್ಮ ಸತೀಶ್ ರವರು ಹೋಗಿರಲಿಲ್ಲ. ಸದರಿ ಮನೆಯನ್ನು ಅಮುದಾ ರವರು ನನ್ನ ಮಗ ಹರೀಶ್ ಮದುವೆಯಾದ ನಂತರ ಆತನ ಹೆಂಡತಿಯು ಸೇರಿ ಒಟ್ಟು 4 ಜನ ಮಾತ್ರ ಇರುತ್ತೇವೆಂದು ಭೋಗ್ಯಕ್ಕೆ ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನೀವು ಮತ್ತು ನಿಮ್ಮ ತಮ್ಮನೂ ಸಹ ಅದೇ ಮನೆಯಲ್ಲಿ ವಾಸ ಮಾಡಲು ಬರುತ್ತಾರೆಂದು ಆರೋಪಿಗಳಿಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಆ ಸಮಯದಲ್ಲಿ ಹಣ ಬೇಕಾಗಿತ್ತು, ಈ ರೀತಿಯ ಯಾವುದೇ ನಿಬಂಧನೆಗಳು ಹಾಕಿರಲಿಲ್ಲ ಎನ್ನುತ್ತಾರೆ. ನೀವು ಮತ್ತು ಸತೀಶ್ ರವರು ಆ ಮನೆಗೆ ಬಂದ ವಿಚಾರ ಆರೋಪಿಗಳಿಗೆ ಗೊತ್ತಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ನಿಮ್ಮ ತಾಯಿ ಅವರುಗಳು ಕೇವಲ 2 ತಿಂಗಳು ಮಾತ್ರ ಇರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ಮನೆ ತುಂಬಾ ಚಿಕ್ಕ ಮನೆಯಾಗಿದ್ದು, 5 ಜನ ವಾಸ ಮಾಡಲು ಆಗುತ್ತಿರಲಿಲ್ಲ. ಆದ್ದರಿಂದಲೇ ಆರೋಪಿಗಳು 5 ಜನರು ಆ ಮನೆಯಲ್ಲಿ ವಾಸ ಮಾಡುವುದು ಇಷ್ಟ ಇರಲಿಲ್ಲ ಎಂದರೆ ಸಾಕ್ಷಿ ಅದು ಸುಳ್ಳು , ಅದು 2 ಬೆಡ್ ರೂಂನ ಮನೆ ಎನ್ನುತ್ತಾರೆ.

ನಿಪಿ-1 ರ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ 3 ತಿಂಗಳ ಮೊದಲೇ ಮನೆಯನ್ನು ಖಾಲಿ ಮಾಡುತ್ತೇವೆಂದು ಯಾವುದೇ ಲಿಖಿತ ನೋಟಿಸ್ ನೀಡಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರಿದು ಬಾಯಿ ಮಾತಿನಲ್ಲಿ ಹೇಳಿದ್ದೇವೆ ಎನ್ನುತ್ತಾರೆ. ಮನೆಯ ಎಡಕ್ಕೆ ರಾಜ ಕಾಲುವೆ ಇದ್ದು, ಮನೆಯ ಹಿಂದಕ್ಕೆ ಸುಭಾಷ್ ಶಾಲೆ ಇರುತ್ತದೆ. ಬಲಕ್ಕೆ ಮತ್ತೊಂದು ಮನೆ ಹಾಗೂ ಎದುರುಗಡೆಗೆ ರಸ್ತೆ ಇರುತ್ತದೆ. ಸದರಿ ರಸ್ತೆ ತುಂಬಾ ಜನಸಂದಣಿ ಇರುವ ರಸ್ತೆ ಎಂದರೆ ಸಾಕ್ಷಿ ಅಷ್ಟೇನೂ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಜನ ಓಡಾಡುತ್ತಾರೆ ಎನ್ನುತ್ತಾರೆ ಎನ್ನುವುದು ಸರಿ.

2 ನೇ ಆರೋಪಿ ವಿಶ್ವನಾಥ್ ರವರಿಗೆ ಹೃದಯ ಸಂಬಂಧಿ ಕಾಯಿಲೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿಯವರ

This is a True Copy of the Court Records Online. Authenticated @ districts.ecourtsindia.com/cnr/KABC030971662017/truecopy/order-2.pdf

www.ecourtsindia.com

ಕೈಯಲ್ಲಿ ಭಾರ ಎತ್ತುವುದಾಗಲೀ, ಹೊರಟು ಕೆಲಸಗಳನ್ನು ಮಾಡುವುದಾಗಲೀ ಆಗುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಆರೋಪಿ ಹಾರ್ಟ್ ಪೇಷೆಂಟ್ ಎಂದು ನಿಮಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಗಲಾಟೆಯಾಯಿತಂದು ಹೇಳುವ ಸಮಯದಲ್ಲಿ 2 ನೇ ಆರೋಪಿ ಅಂತಿಮ ವರ್ಷದ ಬಿ ಕಾಂ ಪರೀಕ್ಷೆಗೆ 5 ನೇ ಮಹಡಿಯಲ್ಲಿ ಕುಳಿತುಕೊಂಡು ಓದುತ್ತಿದ್ದರು ಎಂದರೆ ಸಾಕ್ಷಿ ಆ ಸಮಯದಲ್ಲಿ ಅಲ್ಲಿ ಇರಲಿಲ್ಲ, ನಂತರ ಬಂದು ಹೊಡೆದರು ಎನ್ನುತ್ತಾರೆ.

ಅಮುದ ಮತ್ತು ಹರೀಶ್ ರವರು ಭೋಗ್ಯದ ಕರಾರು ಪತ್ರ ಮುಂದುವರಿಸಲು ಸಹಿ ಮಾಡಿಸಿಕೊಂಡು, ಹೊರಗೆ ಹೋದ ನಂತರ ನೀವು ಆರೋಪಿಗಳ ಮನೆಗೆ ಹೋಗಿ, ಆ ಪತ್ರಕ್ಕೆ ಸಹಿ ಹಾಕ ಬೇಡಿ ಆ ಹಣ ನನಗೆ ಬೇಕು ಎಂದು ಕೊಡಿ ಎಂದು ಗಲಾಟೆ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆ ಸಮಯದಲ್ಲಿ ನಿಮಗೂ ಹಾಗೂ ನಿಮ್ಮ ತಾಯಿಗೂ ಹಣದ ವಿಚಾರವಾಗಿ ಅಲ್ಲೇ ಗಲಾಟೆಯಾಯಿತು, ಸದರಿಯಮರು ಆ ಹಣ ನಾನು ಕೊಟ್ಟಿರುವುದು ನನಗೆ ಕೊಡಿ ಎಂದು ಕೇಳುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆ ಸಮಯದಲ್ಲಿ 2 ನೇ ಆರೋಪಿಗೆ ನಾನೇ ಹೊಡೆದಿದ್ದೇನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಮಂಜುಳ ಎನ್ನುವವರು 5 ನೇ ಮಹಡಿಯಲ್ಲಿ ಕುಳಿತು ಓದುತ್ತಿದ್ದ ಭರತ್ ರವರನ್ನು ಕರೆದು, ನಿಮ್ಮ ತಂದೆಗೆ ಹೊಡೆಯುತ್ತಿದ್ದಾರೆ ಎಂದು ಹೇಳಿದ್ದಕ್ಕೆ ಆಗ 1 ನೇ ಆರೋಪಿ ಮೊದಲನೇ ಮಹಡಿಗೆ ಜಗಳ ಬಿಡಿಸಲು ಬಂದಾಗ ನೀವು, ಹರೀಶ್ ಮತ್ತು ಸತೀಶ್ ರವರುಗಳು ಸೇರಿಕೊಂಡು 1 ನೇ ಆರೋಪಿ ಭರತ್ ಗೆ ಹೊಡೆದಿದ್ದೀರಿ ಎಂದರೆ ಸುಳ್ಳು ಎನ್ನುತ್ತಾರೆ. ಆ ಸಮಯದಲ್ಲೇ ನೀವು ಆರೋಪಿಗಳ ಮನೆಯಿಂದ ಹೊರಗೆ ಬಂದು, ಸದರಿ ಮನೆಯ ಚಿಲಕ ಹಾಕಿ, ಅವರನ್ನು ಅಲ್ಲೇ ಕೂಡಿ ಹಾಕಿ ಈ ಪೋಲಿಸ್ ದೂರನ್ನು ನೀಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನೀವು ಆರೋಪಿಗಳ ಜೊತೆ ಹರೀಶ್ ಮತ್ತು ಸತೀಶ್ ರವರುಗಳು ಜೊತೆ ಸೇರಿಕೊಂಡು ಗಲಾಟೆ ಮಾಡುತ್ತಿರುವಾಗ ಬಿಡಿಸಲು ಬಂದ ನಿಮ್ಮ ತಾಯಿಯನ್ನು ಸಹ ತಳ್ಳಿದ್ದೀರಿ ಎಂದರೆ ಸುಳ್ಳು ಎನ್ನುತ್ತಾರೆ. ಈ ಗಲಾಟೆಯನ್ನು ಕೇಳಿದ ಅಕ್ಕ ಪಕ್ಕದ ಜನ ಆರೋಪಿಗಳ ಮನೆಯ ಚಿಲಕ ತೆಗೆದಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

ನಾನು 2 ನೇ ಆರೋಪಿಯ ತಂದೆಯ ವಿರುದ್ಧ ಭೋಗ್ಯದ ಹಣ ಬರ ಬೇಕೆಂದು ಸಿವಿಲ್ ವ್ಯಾಜ್ಯ ಹೂಡಿದ್ದೇನೆ ಎನ್ನುವುದು ಸರಿ. ಅದೇ ದಾವೆಯಲ್ಲಿ ನಿಮ್ಮನ್ನು ಖಾಲಿ ಮಾಡಿಸಬಾರದೆಂದು ಮಧ್ಯಂತರ ಅರ್ಜಿಯನ್ನು ಹಾಕಿದ್ದೀರಾ ಎಂದರೆ ಸಾಕ್ಷಿ ಹೌದು, ಆರೋಪಿಗಳು ಸಾಲ ಮಾಡಿದ್ದ ಬ್ಯಾಂಕ್ ನವರು ಮನೆ ಖಾಲಿ ಮಾಡಲು ನಮಗೆ ನೋಟಿಸ್ ಕಳುಹಿಸಿದ್ದರು, ಆದ್ದರಿಂದ ಈ ದಾವೆಯನ್ನು ಹೂಡಿ, ತಡೆಯಾಜ್ಞೆಗೆ ಅರ್ಜಿಯನ್ನು ಸಲ್ಲಿಸಿದ್ದೆವು ಎನ್ನುತ್ತಾರೆ. ಸದರಿ ದಾವೆಯಲ್ಲಿ ಆರೋಪಿಗಳು ಲಿಖಿತ ಹೇಳಿಕೆ ಮತ್ತು ಅರ್ಜಿಗೆ ತಕರಾರನ್ನು ಸಲ್ಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಈವರೆಗೂ ನೀವಾಗಲೀ, ನಿಮ್ಮ ವಕೀಲರಾಗಲೀ ಹಾಜರಾಗುತ್ತಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಹೋಗುತ್ತಾರೆ, ನನ್ನನ್ನು ಬರುವ ಅವಶ್ಯಕತೆ ಇಲ್ಲ ಎಂದಿದ್ದಾರೆ.

ಸಿವಿಲ್ ದಾವೆ ಬಾಕಿ ಇದೆ ಎಂದು ನಿಮ್ಮ ಮನೆಯ ಮುಂದೆ ಬೋರ್ಡ್ ಹಾಕಿಕೊಂಡು, ಸದರಿ ಮನೆಯನ್ನು ಮಾರಾಟ ಮಾಡಲು ಬಿಡುತ್ತಿಲ್ಲ ಎಂದರೆ ಸಾಕ್ಷಿ ನಮ್ಮ ಹಣ ಕೊಟ್ಟರೆ ನಾವು ಈಗಲೇ ಖಾಲಿ ಮಾಡುತ್ತೇವೆ ಎನ್ನುತ್ತಾರೆ. ಆ ಗಲಾಟೆ ಸಮಯದಲ್ಲಿ ಅಕ್ಕ ಪಕ್ಕದವರನ್ನು ಸಹಾಯಕ್ಕೆ ಕರೆಯಲಿಲ್ಲ ಎಂದರೆ ಸಾಕ್ಷಿ ಇಲ್ಲ, ಆ ಸಮಯದಲ್ಲಿ ದೂರು ಕೊಡಲು ಠಾಣೆಗೆ ಹೋದೆವು ಎನ್ನುತ್ತಾರೆ. ಯಾವುದೇ ಗಲಾಟೆ ಆಗಿಲ್ಲ, ಆರೋಪಿಗಳು ನಿಮ್ಮನ್ನು ತಡೆದಿಲ್ಲ, ಹೊಡೆದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಯಾವುದೇ ಗಲಾಟೆ ಆಗಿಲ್ಲ, ಈ ಸಂಬಂಧ ನಾನು ಕೆ ಸಿ ಜನರಲ್ ಆಸ್ಪತ್ರೆಯಲ್ಲಿ ಮತ್ತು

This is a True Copy of the Court Records Online. Authenticated @ districts.ecourtsindia.com/cnr/KABC030971662017/truecopy/order-2.pdf

www.ecourtsindia.com

ಮಣಿಪಾಲ್ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ನಾನು ಬೇರೆಲ್ಲೋ ಆಗಿರುವ ಗಾಯವನ್ನು ಈ ಪ್ರಕರಣಕ್ಕೆ ಹೊಂದಿಸಿ, ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾವುದೇ ಗಲಾಟೆ ಆಗಿಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ- 2 ರಂತೆ ಪೋಲಿಸ್ ನವರು ಘಟನೆ ನಡೆಯಿತೆಂದು ಹೇಳುವ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎನ್ನುವುದು ಸರಿಯಲ್ಲ ಅದರಂತೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಮುದ್ದೆಮಾಲು 1 ರ ದೊಣ್ಣೆಯನ್ನು ನಾನೇ ಪೋಲಿಸ್ ನವರಿಗೆ ಕೊಟ್ಟು, ಈ ಪ್ರಕರಣಕ್ಕೆ ಸೇರಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿ, ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಈ ಮುಂದುವರಿದ ಪಾಟಿ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ

44ನೇ ಅ.ಮು.ಮ.ದಂ. ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030971662017/truecopy/order-2.pdf